

# ಟ್ಯಾಗೋರ್ ಮತ್ತು ಒಂಬತ್ತು ಬಾಕ್ಸ್‌ಗಳು

ಕಲಾಕೃತಿಯೊಂದರ ಮಹತ್ವ ಅದರ ರಚನೆಯಲ್ಲಷ್ಟೇ ಅಲ್ಲ, ನೋಡಿ ಮೆಚ್ಚುವವರ ಕಲಾರಸಿಕತೆಯಲ್ಲೂ ಇರುತ್ತದೆ.

■ ಮುರಳೀಧರ ಎನ್.ಆರ್.

ಎಪ್ಪತ್ತರ ದಶಕದ ಸಮಯ. ನಾನಾಗ ಏಳನೇ ತರಗತಿಯಲ್ಲಿದ್ದೆ. ಒಂದು ದಿನ ನಮ್ಮ ಹೆಡ್ ಮೇಡಂ, 'ಮುಂದಿನ ಸೋಮವಾರ ರವೀಂದ್ರನಾಥ ಟ್ಯಾಗೋರರ ಫೋಟೊ ತರಬೇಕು' ಎಂದರು. ಈಗಿನಂತೆ ಆಗ ತಕ್ಷಣಕ್ಕೆ ಫೋಟೊ ಸಿಗುತ್ತಿರಲಿಲ್ಲ. ಅಲ್ಲಿ ಇಲ್ಲಿ ಹುಡುಕಿದೆ. ಸಣ್ಣ ನೋಟ್ ಬುಕ್ ಸೈಜಿನ ಟ್ಯಾಗೋರರ ಫೋಟೋ ಸಿಕ್ಕಿತು. ಆದರೆ, ಆ ಫೋಟೋನ ಹೆಡ್ ಮೇಡಂ ಒಪ್ಪುವುದಿಲ್ಲ ಅನ್ನಿಸಿತು. ಅಪ್ಪನಿಗೆ ವಿಷಯ ತಿಳಿಸಿದೆ.

'ಒಂದು ಕೆಲಸ ಮಾಡು. ಅಂಗಡಿಗೆ ಹೋಗಿ ದೊಡ್ಡ ಡ್ರಾಯಿಂಗ್ ಶೀಟ್ ತಗೊಂಡು ಬಾ' ಅಂದ್ರು ಅಪ್ಪ. ಅಂಗಡಿಗೆ ಹೋಗಿ, ನಟರಾಜ ಪೆನ್ಸಿಲ್ ಮತ್ತು ಡ್ರಾಯಿಂಗ್ ಶೀಟ್ ತಂದೆ. ಆ ವೇಳೆಗೆ ರಾತ್ರಿ ಊಟದ ಸಮಯವಾಗಿತ್ತು.

ಊಟದ ನಂತರ ಅಪ್ಪನ ಕಾರ್ಯಾಚರಣೆ ಶುರುವಾಯಿತು. ನಾನು ಕೊಟ್ಟ ಸಣ್ಣ ಫೋಟೊ ಮೇಲೆ ಅಪ್ಪ ಒಂಬತ್ತು ಬಾಕ್ಸ್‌ಗಳನ್ನು ಬರೆದರು. ಎಲ್ಲವೂ ವಿಚಿತ್ರ ಅನಿಸುತ್ತಿತ್ತು. ಫೋಟೊ ಮೇಲೆ ಬಾಕ್ಸ್‌ಗಳನ್ನು ಯಾಕೆ ಬರೀತಾ ಇದ್ದಾರೆ ಅಂತ ಗೊತ್ತಾಗಲಿಲ್ಲ. ಅದೇ ರೀತಿ ಡ್ರಾಯಿಂಗ್ ಶೀಟ್ ಮೇಲೆ ಅಷ್ಟೇ ಸಂಖ್ಯೆಯ ಬಾಕ್ಸ್‌ಗಳನ್ನು ಬರೆದರು. ತಲೆಯಿಂದ ಟ್ಯಾಗೋರರ ಚಿತ್ರ ಶುರು ಮಾಡಿದರು. ಔಟ್ ಲೈನ್ ರೆಡಿ ಆಯಿತು. ಸಣ್ಣ ಫೋಟೋ ಎನ್‌ಲಾರ್ಜ್ ಮಾಡ್ತಾ ಇದ್ದಾರೆ ಅಂತ ಮನವರಿಕೆ ಆಯ್ತು.

ನಾನು ಆಕಳಿಸುವುದನ್ನು ಗಮನಿಸಿ, 'ಹೋಗು ಮಲಗು. ಬೆಳಿಗ್ಗೆ ನೋಡೋಣ' ಅಂದರು. ಮಲಗಿದೆ. ರಾತ್ರಿಯೆಲ್ಲ ಅಸ್ಪಷ್ಟ ಕನಸುಗಳು.

ಬೆಳಿಗ್ಗೆ ಎದ್ದಾಗ ಅಪ್ಪ ನನಗಾಗಿ ಕಾಯುತ್ತಿದ್ದರು. ಅವರ ಮುಂದೆ ರವೀಂದ್ರನಾಥ ಟ್ಯಾಗೋರರ ಚಿತ್ರ ನಗುತ್ತಿತ್ತು. ಫೋಟೊದಲ್ಲಿನ ಕಲರ್ ಚಿತ್ರ ಇಲ್ಲಿ ಬ್ಲಾಕ್ ಅಂಡ್ ವೈಟ್ ಆಗಿ ಬದಲಾಗಿತ್ತು. ಆ ಕಣ್ಣುಗಳು... ಜೊಂಪೆ ಕೂದಲಿನ ಅಂದ... ತುಟಿಗಳನ್ನು ಮುಚ್ಚುವಂತಹ ಮೀಸೆ... ಋಷಿಗಳಿಗೆ ಇರುವಂಥ ಗಡ್ಡ... ಎಲ್ಲವನ್ನು ನಿಧಾನವಾಗಿ ನೋಡಿದೆ. ಅಪ್ಪನಿಗೆ ನಾನು ನೋಡುವ ರೀತಿ ಬಹಳ ಇಷ್ಟವಾಗಿರಬೇಕು. ಬಾ ಅಂತ ಕರೆದ ಹಾಗಾಯ್ತು. ಹೋಗಿ ಅಪ್ಪನನ್ನು ಅಪ್ಪಿಕೊಂಡೆ.

ರಾತ್ರಿಯೆಲ್ಲ ನನಗಾಗಿ ಅಪ್ಪ ನಿದ್ದೆಯನ್ನೇ ಮಾಡಿರಲಿಲ್ಲ ಎಂದು ತಿಂಡಿ ತಿನ್ನುವ ಟೈಂನಲ್ಲಿ ಅಮ್ಮ ಹೇಳಿದರು.

ಶಾಲೆಗೆ ಹೋಗಲು ಎಂದಿಗಿಂತಲೂ ಆತುರ ಕಾತುರ. ಶಾಲೆಗೆ ಹೋದಾಗ ಹೆಡ್ ಮೇಡಮ್ ಇನ್ನೂ ಬಂದಿರಲಿಲ್ಲ. ನನಗೂ ಕಾಯಲು ಇಷ್ಟವಿರಲಿಲ್ಲ. ಶಾಲೆಯ ಹಿಂದೆಯೇ ಅವರ ಮನೆ ಇತ್ತು. ಮನೆಯ ಬಾಗಿಲು ತಟ್ಟಿದೆ. ಅವರು ಹೊರಗೆ ಬರುವುದನ್ನೇ ಕಾದು, ಅವರಿಗೆ ಅಪ್ಪ ಬರೆದ ರೋಲ್ ಆದ ಡ್ರಾಯಿಂಗ್ ಶೀಟನ್ನು ಕೊಟ್ಟೆ. ಅವರು ಕೂಡ ಅದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಕೇಳುವ ಮೊದಲೇ, 'ನಮ್ಮ ಅಪ್ಪಾ ಬರೆದಿರೋದು' ಅಂತ ಹೆಮ್ಮೆಯಿಂದ ಹೇಳಿದೆ. ನನ್ನ ಅಪ್ಪನಿಗೆ ತಲುಪಿಸಬೇಕಾದ ಸಂದೇಶವನ್ನು ನನ್ನ ಬೆನ್ನು ತಟ್ಟಿ ಹೇಳಿದರು. ಅಂದು ಶಾಲೆಯಲ್ಲಿ ನನ್ನ ದಿನವಾಗಿತ್ತು. ನಾನು ಹೀರೋ ಆಗಿದ್ದೆ. ಪ್ರತಿ ತರಗತಿಗೂ ಆ ಡ್ರಾಯಿಂಗ್ ತೋರಿಸಿದ ಮೇಡಂ, ಟ್ಯಾಗೋರರ ಬಗ್ಗೆ ಹೇಳುತ್ತಾ ಅಪ್ಪನನ್ನೂ ಹೊಗಳಿದರು.

ನಾನು ಹತ್ತನೇ ತರಗತಿ ಓದಲು ಬೆಂಗಳೂರಿನಿಂದ ಮಂಗಳೂರಿಗೆ ಬಂದೆ. ಸೆಕೆಂಡ್ ಪಿ.ಯು.ಸಿ.ಯೂ ಮುಗಿಯಿತು... ಆ ರಜಾದಲ್ಲಿ ಮತ್ತೆ ಬೆಂಗಳೂರಿಗೆ ಬಂದೆ. ಮತ್ತೆ ಹೆಡ್ ಮೇಡಂ ಅವರನ್ನು ಭೇಟಿಯಾಗಿ ನನ್ನ ಪರಿಚಯ ನೆನಪು ಮಾಡಿಕೊಟ್ಟೆ. ಅವರು ಏನೋ ಜ್ಞಾಪಕ ಮಾಡಿಕೊಂಡವರಂತೆ, ಹಳೆಯ ಅಲ್ಮೇರಾದಿಂದ ಟ್ಯಾಗೋರರ ಚಿತ್ರವನ್ನು ತೆಗೆದು ತೋರಿಸಿದರು.

'ಇದು ನಿನ್ನ ಅಪ್ಪ ಬರೆದಿದ್ದು ಅಲ್ವ... ಎಷ್ಟು ಚೆನ್ನಾಗಿದೆ ನೋಡು. ನಮ್ಮ ಶಾಲೇನ ಕ್ಲೀನ್ ಮಾಡೋ ಟೈಂನಲ್ಲಿ ಇದನ್ನು ಹಳೆಯ ಪೇಪರ್ ಜೊತೆ ಕೊಟ್ಟುಬಿಡಿ ಅಂತ ಕೆಲವರು ಹೇಳಿದರು. ನನಗೆ ಇದನ್ನು ಕೊಡುವ ಮನಸಾಗಲಿಲ್ಲ. ಡ್ರಾಯಿಂಗ್ ಅಂದ್ರೆ ಹೀಗಿರಬೇಕು. ನೋಡು, ಇವತ್ತು ಬರೆದ ಹಾಗಿದೆ. ಟ್ಯಾಗೋರರ ಚಿತ್ರ ಬೇಕಾದಾಗಲೆಲ್ಲ ನಾನು ಅವತ್ತಿಂದ ಇವತ್ತಿನವರೆಗೂ ಇದನ್ನೇ ನಮ್ಮ ಮಕ್ಕಳಿಗೆ ತೋರಿಸ್ತಿದ್ದೇನೆ' ಎಂದರು.

ಮೇಡಂ ಮಾತು ಕೇಳಿ ನನ್ನ ಮನಸ್ಸು ಹಾಗೂ ಹೃದಯ ತುಂಬಿಬಂದಿತ್ತು. ಮೇಡಂಗೆ ಧನ್ಯವಾದಗಳನ್ನು ತಿಳಿಸಿದೆ.

ಅಪ್ಪನ ಕಲಾಕೃತಿ ಕುರಿತ ಭಾವುಕತೆ ಒಂದೆಡೆಯಾದರೆ, ಆ ಕಲಾಕೃತಿಯನ್ನು ಮೇಡಂ ಮೆಚ್ಚಿಕೊಂಡಿದ್ದು ಹಾಗೂ ಅದನ್ನು ಜತನವಾಗಿರಿಸಿದ್ದು ಸಾಮಾನ್ಯ ಸಂಗತಿಯೆನ್ನಿಸಲಿಲ್ಲ. ನನ್ನ ಕಣ್ಣುಗಳು ಹನಿಗೂಡಿದವು. ಒಂದು ಬಣ್ಣದ ಪುಟ್ಟ ಫೋಟೊ, ಒಂಬತ್ತು ಬಾಕ್ಸ್‌ಗಳು, ಚಿತ್ರದ ಔಟ್‌ಲೈನ್, ಟ್ಯಾಗೋರರನ್ನು ಚಿತ್ರಿಸಿದ ರೇಖೆಗಳಲ್ಲಿರುವ ಅಪ್ಪನ ಬೆರಳುಗಳ ಜಾದೂ... ಎಷ್ಟೊಂದು ಸಿಹಿ ನೆನಪುಗಳು. ಈಗಲೂ ಟ್ಯಾಗೋರ್ ಎಂದರೆ ನನಗೆ ಒಂಬತ್ತು ಬಾಕ್ಸ್‌ಗಳೇ ನೆನಪಾಗುತ್ತವೆ. ■